“ಅದನ್ನೇ ನಾನು ನಿಮಗೆ ಹೇಳುತ್ತಿದ್ದೇನೆ... ನಮ್ಮಿಬ್ಬರ ಮದುವೆಯ ವಿಷಯ ಮನೆಯಲ್ಲಿ ಚರ್ಚೆಯಾದಾಗ ನನ್ನ ತಂದೆ ಖುದ್ದಾಗಿ ನಿಮ್ಮನ್ನು, ನಿಮ್ಮ ಮನೆಯನ್ನು, ಮನೆಯ ವಾತಾವರಣವನ್ನು ನೋಡುವುದಕ್ಕೆ ಬಯಸಿದರು. ನಿಮಗೆ ಸೂಚನೆ ನೀಡದೆಯೇ ಇಲ್ಲಿಗೆ ಬಂದಿದ್ದರು. ಈ ಓಣಿಗೆ ಬಂದಾಗ ಅವರಿಗೆ ನಿಮ್ಮ ಮನೆ ಯಾವುದೆಂದು ಗೊತ್ತಾಗಲಿಲ್ಲ. ಈ ಓಣಿಯ ಕೊನೆಯಲ್ಲಿ ಒಂದು ಸೋಡಾ ಶರಬತ್ತಿನ ಅಂಗಡಿ ಇದೆಯಲ್ಲ...”

“ಹ್ಞಾ... ಹ್ಞಾ... ಅದೇ ಆಗಲೇ ಹೇಳಿದೆವಲ್ಲ... ಆ ಅಂಗಡಿಯಿಂದ ನನ್ನವ್ವ ಡಜನ್‌ಗಟ್ಟಲೆ ಸೋಡಾವನ್ನು ತರಿಸಿಕೊಳ್ಳುತ್ತಲೇ ಇರುತ್ತಾಳೆ; ಆತನೇ ಮನೆಗೆ ತಲುಪಿಸುತ್ತಾನೆ. ಆತನಿಗೆ ನಮ್ಮ ಮನೆ ಚೆನ್ನಾಗಿ ಗೊತ್ತು...”

“ಆ ಅಂಗಡಿಯವನ ಬಳಿಯಲ್ಲಿ ನನ್ನ ತಂದೆಯವರು ನಿಮ್ಮ ಮನೆ ಎಲ್ಲಿದೆಯೆಂದು ವಿಚಾರಿಸಿದ್ದಾರೆ. ಹಾಗೆಯೇ ನಿಮ್ಮ ಬಗ್ಗೆಯೂ ವಿಚಾರಿಸಿದ್ದಾರೆ. ಅದಕ್ಕೆ ಆ ಅಂಗಡಿಯವನು, ‘ಒಳ್ಳೆಯ ಕುಟುಂಬ... ಆದರೆ ವಾರದಲ್ಲಿ ಎರಡು ಮೂರು ಬಾರಿ ನನ್ನಿಂದ ಡಜನ್‌ಗಟ್ಟಲೆ ಸೋಡಾವನ್ನು ತರಿಸಿಕೊಳ್ಳುತ್ತಾರೆ... ಬಹುಶಃ ವ್ಹಿಸ್ಕಿ ಚೆನ್ನಾಗಿ ಓಡುತ್ತೆ ಅನ್ನಿಸತ್ತೆ... ಹಗಲಿನಲ್ಲಿ ಅವರು ಕುಡಿದಿದ್ದನ್ನು ನಾನು ನೋಡಿಲ್ಲ... ಆದರೆ ರಾತ್ರಿ...’ ಎಂದು ಹೇಳಿದ್ದಾನೆ. ಅದನ್ನು ಕೇಳಿದ ನನ್ನ ತಂದೆ ನಿಮ್ಮ ಮನೆಗೆ ಬರಲೇ ಇಲ್ಲ; ಮನೆಗೆ ಹಿಂದಿರುಗಿದ್ದಾರೆ; ಅಮ್ಮನ ಬಳಿ ಎಲ್ಲವನ್ನೂ ಹೇಳಿದ್ದಾರೆ. ನನ್ನಮ್ಮ ಆ ಮಾತುಗಳನ್ನು ಕೇಳುತ್ತಿದ್ದಂತೆಯೇ, ‘ಏನಿದ್ದರೇನು, ಕುಡುಕರು ಕುಡುಕರೇ... ನನ್ನ ಮಗಳನ್ನು ಕುಡುಕನಿಗೆ ಮಾತ್ರ ಕೊಡಲ್ಲ' ಎಂದು ಹಟ ಮಾಡಿದರು. ಅದರಿಂದಾಗಿ ಕಾವ್ಯ ಇಟ್ಟಿಗೆ ಭಟ್ಟಿಯ ಪಾಲಾಯಿತು.”

ಒಮ್ಮೆಗೇ ನನ್ನಲ್ಲಿ ರಕ್ತ ತಣ್ಣಗಾದ ಅನುಭವ. ಒಂದೆರಡು ಕ್ಷಣಗಳು ಅಷ್ಟೇ... ಇದ್ದಕ್ಕಿದ್ದಂತೆ ಅದೇ ರಕ್ತ ಕುದಿಯತೊಡಗಿತ್ತು. ‘ಆ ಸೋಡಾ ಅಂಗಡಿಯವನನ್ನು ಕೊಂದುಬಿಡಬೇಕು...’ ಅನ್ನಿಸಿತ್ತು ಆ ಕ್ಷಣ. ಆದರೆ... ‘ಒಬ್ಬ ಅಧ್ಯಾಪಕನಾಗಿ ನಾನು ದುಡುಕುವುದೇ?’ ಮನಸ್ಸನ್ನು ನಿಯಂತ್ರಣಕ್ಕೆ ತಂದುಕೊಳ್ಳುವ ಸಲುವಾಗಿ ಕಾವ್ಯಾಳಿಗೆ, “ಒಂದ್ ನಿಮಿಷ... ಬಂದೆ...” ಎಂದು ಹೇಳಿ ನನ್ನ ಕೋಣೆ ಸೇರಿಕೊಂಡೆ. ಬಾತ್‌ರೂಮ್‌ನಿಂದ ಇಟ್ಟಿಗೆ ಭಟ್ಟಿಯ ಯುವರಾಜನ ಶಬ್ದ, ಹಾಲಿನಿಂದ ಅವ್ವ ಕಾವ್ಯಾಳನ್ನು ಉಪಚರಿಸುತ್ತಿದ್ದ ಶಬ್ದ ಕೇಳಿಸುತ್ತಿದ್ದವು.

## ನಾಗ ಎಚ್ ಹುಬ್ಬಿ

ಮೂಲತಃ ಹುಬ್ಬಳ್ಳಿಯವರು. ಪತ್ರಿಕೋದ್ಯಮದಲ್ಲಿ ಪಿಎಚ್.ಡಿ. ಪದವೀಧರ. ಕೆಲಕಾಲ ಪತ್ರಕರ್ತರಾಗಿ ಕೆಲಸ. ಪ್ರಸ್ತುತ ಜಾರ್ಖಂಡ್‌ನ ರಾಂಚಿ ವಿಶ್ವವಿದ್ಯಾಲಯದಲ್ಲಿ ಪತ್ರಿಕೋದ್ಯಮ ವಿಭಾಗದ ಪ್ರಾಧ್ಯಾಪಕ. ಜಾರ್ಖಂಡ್, ಬಿಹಾರ, ಒಡಿಶಾ, ಪಶ್ಚಿಮ ಬಂಗಾಳ, ಛತ್ತೀಸಗಡ, ನಿಕೋಬಾರ್ ದ್ವೀಪ, ಉತ್ತರಾಖಂಡ ಮುಂತಾದ ರಾಜ್ಯಗಳ ಆದಿವಾಸಿಗಳ ನೆಲೆಗಳಿಗೆ ಭೇಟಿ ಕೊಟ್ಟು ಅವರ ಕುರಿತು ಜನಾಂಗೀಯ ಅಧ್ಯಯನ ನಡೆಸುತ್ತಿದ್ದಾರೆ. ಪ್ರಕಟಿತ ಕೃತಿಗಳು: ‘ಸರಹುಲ್’, ‘ಜಾರ್ಖಂಡ್ ಆದಿವಾಸಿ ಬದುಕು’, ‘ಭೂತನಾಥ’, ‘ಅಸುರ’, ‘ಬದಲಾದರೆ ಯೋಚನೆ, ನಿಮ್ಮದೇ ಗೆಲುವು’ ಮತ್ತು ‘ದಕ್ಷಿಣ ಭಾರತದ ಜಾತಿಗಳು ಮತ್ತು ಬುಡಕಟ್ಟುಗಳು’.